೫

ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಕ್ಷೇತ್ರ ಸದಸ್ಯರಿಗೆ ಭಾಷಾ ಕಾರ್ಯಾಗಾರ

೧೯-೨೪ ಮಾರ್ಚ್ ೨೦೧೩, ರಾಜ್ಯ ಸಂಸ್ಥೆ ಕಛೇರಿ, ಅಜೀಂ ಪ್ರೇಮ್‌ಜೀ ಫೌಂಡೇಷನ್, ಜೈಪುರ

– ನಿವೇದಿತ ವಿಜಯ್ ಬೆಡದೂರ್

ಸಾರಾಂಶ: ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಎಂದರೆ ಅದರ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು. ಅದರ ಭಾಷಿಕ ಸ್ವರೂಪದಲ್ಲಿ ಮೂರು ಅಂಶಗಳಿವೆ: ಅವು ಧ್ವನಿಯ ಸ್ವರೂಪ, ಪದದ ಸ್ವರೂಪ ಮತ್ತು ವಾಕ್ಯ ರಚನೆಯ ಸ್ವರೂಪಗಳಾಗಿವೆ. ಈ ಮೂರೂ ಅಂಶಗಳೂ ಆಯಾ ಭಾಷೆಯನ್ನು ಮಾತನಾಡುವವರ ಮಧ್ಯ ಬೆಳೆದುಬಂದಿವೆ. ಅದು ವಿಕಸನಶೀಲವಾಗಿಯೂ ಇರುತ್ತದೆ. ಅಂದರೆ ನಿರಂತರ ಬದಲಾವಣೆಗಳಿಗೆ ಒಳಗಾಗುತ್ತಾ ಇರುತ್ತದೆ.

ಧ್ವನಿ, ಪದ ಮತ್ತು ವಾಕ್ಯ ರಚನೆಗೆ ಸಂಬಂಧಿಸಿ ಭಾಷೆಯಿಂದ ಭಾಷೆಗೆ ಸಾಮಾನ್ಯವಾಗಿರುವ ಲಕ್ಷಣಗಳೂ ಇವೆ ಮತ್ತು ಪ್ರತಿ ಭಾಷೆಗೂ ನಿರ್ದಿಷ್ಟವಾದ ಲಕ್ಷಣಗಳೂ ಇವೆ. ಅಂಥ ನಿರ್ದಿಷ್ಟ ಲಕ್ಷಣಗಳೇ ಒಂದು ಭಾಷೆಯನ್ನು ಇತರ ಭಾಷೆಗಳಿಗಿಂತ ಭಿನ್ನವಾಗಿಸುತ್ತವೆ. ಸಾಮಾನ್ಯ ಲಕ್ಷಣಗಳನ್ನು ಕ್ರೋಡೀಕರಿಸಿ ಮಾನವರು ಮಾತಾಡುವ ಭಾಷೆಗಳಿಗೆ ಒಂದು ಸಾರ್ವತ್ರಿಕ ವ್ಯಾಕರಣ ಲಕ್ಷಣವಿದೆ ಎಂಬ ಸಿದ್ಧಾಂತ ರೂಪುಗೊಂಡಿವೆ. ಇದನ್ನು ಮನುಷ್ಯರೆಲ್ಲರಿಗೂ ಸಾಮಾನ್ಯವಾದ ಅಂತರ್ಗತ ಸಾಮರ್ಥ್ಯ ಎನ್ನಬಹುದು. ಈ ಸಾಮರ್ಥ್ಯದ ಕಾರಣಕ್ಕೇ ಪ್ರತಿ ಮಗುವಿಗೂ ಭಾಷಾ ಕಲಿಕೆಯ ಸಾಮರ್ಥ್ಯವಿದೆ ಎನ್ನುವುದು. ಸಾರ್ವತ್ರಿಕ ವ್ಯಾಕರಣ ಎಂಬ ಮೂಲಭೂತ ಸಮಾನ ಅಂಶ ಮತ್ತು ಹುಟ್ಟು ಸಾಮರ್ಥ್ಯಗಳ ಕಾರಣಕ್ಕೆ ಒಂದು ಮಗುವು ತನ್ನ ಪರಿಸರದ ಒಂದಕ್ಕಿಂತ ಹೆಚ್ಚಿಗೆ ಭಾಷೆಗಳನ್ನು ಕಲಿಯಲೂ ಸಮರ್ಥವಾಗುವುದು.

ಮೂಲತ ಒಂದು ಕಾರ್ಯಾಗಾರದ ವರದಿ ಆಗಿರುವ ಇದು ಕೆಲವು ಮೂಲಭೂತ ಪರಿಕಲ್ಪನೆಗಳನ್ನು ಸಂಗ್ರಹವಾಗಿ ಹೇಳುತ್ತದೆ.

ಪ್ರಮುಖ ಪದಗಳು: ಲೇಖಕನ ಆಶಯ ಮತ್ತು ಅರ್ಥದ ಬಹುರೂಪತೆ– authorial intention and multiplicity of meanings, ಸ್ವರ–ವ್ಯಂಜನ ವಿನ್ಯಾಸ: 'CCCV and VCCC'ನ consonantal patterns, ಮಾರ್ಫೀಮ್‌ಗಳು (ಒಂದು ಪದದ ಮತ್ತೆ ಬದಲಾಯಿಸಲು ಸಾಧ್ಯವಿಲ್ಲದ ರೂಪ)– morphemes, ಸುಳ್ಳುಪದ–psendo words.

'ಭಾಷಾ ಕಾರ್ಯಾಗಾರವು' ೨೦೧೩ ಮಾರ್ಚ್ ೧೯ರಿಂದ ೨೪ರ ವರೆಗೆ ಜೈಪುರದಲ್ಲಿ, ಅಜೀಂ ಪ್ರೇಮ್‌ಜೀ ಫೌಂಡೇಷನ್ನಿನ ರಾಜಸ್ಥಾನ ರಾಜ್ಯ ಸಂಸ್ಥೆಯ ಕಛೇರಿಯಲ್ಲಿ ನಡೆಯಿತು. ಪ್ರೊಫೆಸರ್ ರಮಾಕಾಂತ್ ಅಗ್ನಿಹೋತ್ರಿ ಮತ್ತು ಪ್ರೊಫೆಸರ್ ಅಮೃತ್ ಲಾಲ್ ಖನ್ನಾ ಅವರು ಇದಕ್ಕೆ ಮಾರ್ಗದರ್ಶನ ಮಾಡಿದರು. ಇದರಲ್ಲಿ ನಲವತ್ತೇಳು ಸದಸ್ಯರು ಇದ್ದರು. ಇಪ್ಪತ್ತೊಂದು ಸದಸ್ಯರು ಇಂಗ್ಲಿಷ್ ಕೋ–ಡೆವಲಪ್‌ಮೆಂಟ್ ತಂಡದಿಂದ, ಮೂರು ಜನರು ಕನ್ನಡ ಕೋ–ಡೆವಲಪ್‌ಮೆಂಟ್ ತಂಡದಿಂದ, ಇಪ್ಪತ್ತು ಜನರು ಹಿಂದಿ ಕೋ–ಡೆವಲಪ್‌ಮೆಂಟ್ ತಂಡದಿಂದ ಮತ್ತು ಮೂವರು ವಿದ್ಯಾ ಭವನ್ ಸೊಸೈಟಿಯಿಂದ ಭಾಗವಹಿಸಿದ್ದರು. ಕೆಳಗಿನವು ಈ ಕಾರ್ಯಾಗಾರದ ಪ್ರಮುಖ ಉದ್ದೇಶಗಳು:

i ಮಕ್ಕಳು ಭಾಷೆಯನ್ನು ಹೇಗೆ ಕಲಿಯುತ್ತಾರೆ ಎಂದು ಅರ್ಥೈಸುವುದು

ii ಭಾಷೆಯ ಸ್ವರೂಪ ಮತ್ತು ಸಂರಚನೆಯನ್ನು ಅರ್ಥೈಸುವುದು

iii ಭಾಷೆಯ ಗಳಿಕೆ ಮತ್ತು ಭಾಷೆಯ ಕಲಿಕೆಯ ಸ್ವರೂಪವನ್ನು ಅರ್ಥೈಸುವುದು

ಕಲಿಕಾರ್ಥಿಗಳ ಭಾಷೆಗಳ ಸಂಕ್ಷಿಪ್ತ ಚಿತ್ರಣ: ಬಹುಭಾಷಿಕತೆಯನ್ನು ಅರ್ಥೈಸುವ ಕಡೆಗಿನ ಮೊದಲ ಹೆಜ್ಜೆ

ಕಲಿಕಾರ್ಥಿಗಳ ಭಾಷೆಗಳ ಚಿತ್ರಣವನ್ನು ಮಾಡಿಕೊಳ್ಳುವ ಅಗತ್ಯವನ್ನು ರಜನಿಯವರು ಚರ್ಚಿಸಿದರು. ಭಾಗಾರ್ಥಿಗಳ ಭಾಷಾ ಚಿತ್ರಣವನ್ನು ರಚಿಸಿಕೊಳ್ಳಲು ಒಂದು ಚೌಕಟ್ಟನ್ನು ತಯಾರಿಸಲಾಯಿತು. ಎರಡನೆಯ ಅಧಿವೇಶನವು ಭಾಷೆಯನ್ನು ಗಳಿಸಲು ಮಗುವಿನಲ್ಲಿ ಹೇಗೆ ಸಾಮರ್ಥ್ಯವಿದೆ ಎಂಬ ಕಡೆಗೆ ಗಮನಕೊಟ್ಟಿತು. ಅದರಲ್ಲಿ ಭಾಷಾ ಗಳಿಕೆಯು ಅನುಕರಣೆಯಿಂದ ನಡೆಯುವುದೇ ಅಥವಾ ಅರ್ಥ ಮತ್ತು ಶಬ್ದದ ಸಂಬಂಧದಿಂದಲೇ, ಭಾಷೆ ಮತ್ತು ಬೌದ್ಧಿಕತೆಯ ಸಂಬಂಧವೇನು, ಭಾಷೆಯ ಅರ್ಜನೆಯು ಮೊದಲೇ ಅಥವಾ ಬೌದ್ಧಿಕ ಬೆಳವಣಿಗೆಯು ಮೊದಲೇ ಅಥವಾ ಒಂದೇ ಸಮಯಕ್ಕೆ ಎಂಬಂತೆ ಸಂಭವಿಸುವುದೇ, ಮತ್ತು ಮಗುವಿನ ಪೂರ್ವಜ್ಞಾನದ ಮಹತ್ತ್ವವೇನು ಎಂಬ ಪ್ರಶ್ನೆಗಳಿಗೆ ಚರ್ಚೆ ನಡೆದು ಉತ್ತರ ಕಂಡುಕೊಳ್ಳುವುದು ಆಯಿತು.

ಮಾರನೆಯ ದಿನವು 'ಲೇ ಮಶಾಲೇ ಚಲ್ ಪಡೇ ಹೈನ್ ಲೋಗ್ ಮೇರೇ ಗಾನೋಂ ಕೇ' ('Le mashale chal pare hain log mere gaon ke'.) ಎಂಬ ಹಾಡನ್ನು ಹಾಡುವುದರೊಂದಿಗೆ ಪ್ರಾರಂಭವಾಯಿತು. ಹೇಗೆ ಈ ಪದ್ಯವನ್ನು ರೋಮನ್ ಲಿಪಿಯೊಳಗೆ ಬರೆಯಬಹುದು ಎನ್ನುವುದನ್ನು ಕುರಿತು ಚರ್ಚೆ ನಡೆಯಿತು. ಭಾಗೀದಾರರನ್ನು ಅವರು ಆಡುವ ಭಾಷೆಗಳ ಮೇಲಿಂದ ಗುಂಪುಗಳಾಗಿ ವಿಂಗಡಿಸಲಾಯಿತು. ಪ್ರಾಸಂಗಿಕವಾಗಿ ಸ್ಥಳದಲ್ಲಿ ಒಂಬತ್ತು ಭಾಷೆಗಳು ಪ್ರತಿನಿಧಿಸಲ್ಪಟ್ಟವು. ಪ್ರತಿ ಗುಂಪೂ ಹಾಡನ್ನು ತಮ್ಮ ಭಾಷೆಗೆ ತರ್ಜುಮೆ ಮಾಡಿಕೊಂಡವು ಮತ್ತು ಹಾಡನ್ನು ರೋಮನ್ ಲಿಪಿಯಲ್ಲಿ ಬರೆದುಕೊಂಡವು ಮತ್ತು ಕೋಣೆಯ ಗೋಡೆಯ ಮೇಲೆ ಪ್ರದರ್ಶಿಸಿದವು.

ಅನುವಾದ ಕಾರ್ಯದ ಮೇಲಿನ ಪರ್ಯಾಲೋಚನೆಗಳು

ಅಪರಾಹ್ನದ ಅಧಿವೇಶನದಲ್ಲಿ, ಪ್ರೊ. ಅಗ್ನಿಹೋತ್ರಿಯವರು ಭಾಗಾರ್ಥಿಗಳು ಮುಂಜಾನೆ ನಡೆಸಿದ ಕೆಲಸದ ಮೇಲೆ ಚಿಂತನೆ ನಡೆಸುವುದಕ್ಕೆ ನೆರವಾದರು. ಭಾಗಾರ್ಥಿಗಳು ಎಲ್ಲ ಭಾಷೆಗಳನ್ನೂ ಯಾವುದೇ ಒಂದು ಲಿಪಿಯೊಳಗೆ ಬರೆಯಬಹುದು, ಯಾವುದೇ ಒಂದು ಭಾಷೆಯನ್ನು ಇನ್ನಾವುದೇ ಲಿಪಿಯೊಳಗೆ ಕೆಲವು ಬದಲಾವಣೆಗಳೊಂದಿಗೆ ಬರೆಯಬಹುದು ಎಂದು ಅರಿತರು. ವಾಸ್ತವದಲ್ಲಿ ಒಂದು ಭಾಷೆ ಅದರ ಲಿಪಿಯೊಂದಿಗೆ ಮಾಡುವುದು ಏನೂ ಇಲ್ಲ ಮತ್ತು ನಾವು ಈ ಲಿಪಿಯ ಕಟ್ಟುಪಾಡಿನಿಂದ ಮುಕ್ತರಾಗುವುದು ಅಗತ್ಯವಿದೆ. ಜೊತೆಗೆ ಒಂದು ಭಾಷೆಯ ಜ್ಞಾನ ಇನ್ನೊಂದು ಭಾಷೆಯನ್ನು ಅರ್ಥೈಸುವುದಕ್ಕೆ ನೆರವಾಗುತ್ತದೆ. ಮೂಲಭಾಷೆಯ ಸಂವಾದ ಏನು ಎಂಬುದು ಅರ್ಥವಾಗದೆ ಇದ್ದರೆ ಅನುವಾದವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನೂ ಅವರು ತಿಳಿಸಿದರು. ಭಾಗವಹಿಸಿದವರು ಮಾನವ ಭಾಷೆಗಳ ರಚನೆಯ ಮಧ್ಯೆ ಸಾಮಾನ್ಯವಾಗಿ ಇರುವ ಅಂಶಗಳನ್ನೂ ಗಮನಿಸಿದರು. ಜೊತೆಗೆ ಭಾಷೆಯಿಂದ ಭಾಷೆಗೆ ಸ್ವರ ಮತ್ತು ವ್ಯಂಜನ ಧ್ವನಿಗಳಲ್ಲಿ ಇರುವ ವ್ಯತ್ಯಾಸವನ್ನೂ ಗುರುತಿಸಿ ಮೆಚ್ಚಿಕೊಳ್ಳುವುದಕ್ಕೆ ಸಾಧ್ಯವಾಯಿತು. 'ಓದುವುದು ಎಂದರೆ ಏನು' ಎಂಬ ಅಂತಿಮ ಅಧಿವೇಶನವನ್ನು ಪಲ್ಲವಿಯವರು ನಡೆಸಿಕೊಟ್ಟರು. ಈ ಅವಧಿಯಲ್ಲಿ ಲೇಖಕನ ಆಶಯ ಮತ್ತು ಅರ್ಥದ ಬಹುರೂಪತೆ ಕುರಿತು ಚೇತೋಹಾರಿಯಾದ ಚರ್ಚೆ ನಡೆಯಿತು.

ಭಾಷೆಯ ಸ್ವರೂಪದ ಕುರಿತು ಹುಡುಕಾಟ

ಕಾರ್ಯಾಗಾರದ ಮೂರನೆಯ ದಿನದ ಮೊದಲ ಅಧಿವೇಶನವು ಭಾಗವಹಿಸಿದವರ ಅನುಮಾನಗಳ ಪರಿಹಾರಕ್ಕೆ ಮೀಸಲಾಯಿತು. ಎರಡನೇ

ಅಧಿವೇಶನವು ಅವರು ತಮ್ಮ ಮನೆ ಭಾಷೆಗೆ ಅನುವಾದಿಸಿಕೊಂಡ ಕವನದ ಪದಗಳಲ್ಲಿ ಸ್ವರ–ವ್ಯಂಜನ ವಿನ್ಯಾಸಗಳನ್ನು ('CCCV and VCCC'ನ consonantal patternsಗಳನ್ನು) ಗುರುತಿಸುವ ಮತ್ತು ತಮ್ಮ ಭಾಷೆಗೆ ಅನುವಾದಿಸಿಕೊಂಡ ಕವನದ ಪದಗಳ ಮಾಹಿತಿಯನ್ನು ಆಧರಿಸಿ ಅವರವರ ಭಾಷೆಗಳಲ್ಲಿ ಈ ಬದಲಾವಣೆಯು ಯಾವ ನಿಯಮಗಳನ್ನು ಅನುಸರಿಸಿದೆ ಎಂಬುದನ್ನು ಗುರುತಿಸುವ ಗುಂಪು ಕೆಲಸಗಳಿಂದ ಕೂಡಿತ್ತು. ಈ ಕೆಲಸದ ಪ್ರಸ್ತುತಿಯು ಬಹುಪಾಲು ಎಲ್ಲ ಭಾಷೆಗಳಿಗೂ ಸಾಮಾನ್ಯವಾದ ಧ್ವನಿ ವ್ಯವಸ್ಥೆಯ ಒಂದು ಮೂಲಭೂತ ಸಾರ್ವತ್ರಿಕ ನಿಯಮವನ್ನು, ಪತ್ತೆಮಾಡಿಕೊಳ್ಳುವುದಕ್ಕೆ ದಾರಿಯಾಯಿತು. ಅಂದರೆ ಬಹುಸಂಖ್ಯೆಯ ಮಾನವ ಭಾಷೆಗಳ ಪದಗಳಲ್ಲಿ ಧ್ವನಿ ಸಮೂಹಗಳ ಸಂರಚನೆಯ ವಿನ್ಯಾಸವು ವ್ಯಂಜನ–ಸ್ವರ–ವ್ಯಂಜನ–ಸ್ವರದ ಅನುಕ್ರಮದಲ್ಲಿರುತ್ತದೆ. ಭಾಷೆಯನ್ನು ಕಲಿಯುವ ಪ್ರಕ್ರಿಯೆಯು ಕಲಿತದ್ದನ್ನು ಕೈಬಿಡುವುದೂ ಆಗಿರುತ್ತದೆ ಯಾಕೆಂದರೆ ಒಂದು ಮಗು ಸಾರ್ವತ್ರಿಕ ನಿಯಮಗಳನ್ನು ಅನುಸರಿಸಿ ಯಾವುದೇ ಭಾಷೆಯನ್ನಾದರು ಕಲಿಯಬಲ್ಲುದು.

ಭಾಷೆಯ ಸ್ವರೂಪವೇನು?

ಕಾರ್ಯಾಗಾರದ ನಾಲ್ಕನೆಯ ದಿನವು ಭಾಷೆಯ ಸ್ವರೂಪವನ್ನು ಕುರಿತ ಚರ್ಚೆಯ ಮೂಲಕ ಪ್ರಾರಂಭವಾಯಿತು. ಪ್ರೊ. ಅಗ್ನಿಹೋತ್ರಿಯವರು ಆಡು ಭಾಷೆಗಳು ಬರವಣಿಗೆಯ ಭಾಷೆಗಳಿಗಿಂತ ವೇಗವಾಗಿ ಬದಲಾಗುತ್ತವೆ, ಮತ್ತು ಯಾರೇ ಆದರು ಧ್ವನಿ ಮತ್ತು ಲಿಪಿಯ ಮಧ್ಯೆ ನಿರಂತರವಾಗಿ ಸಂಬಂಧಗಳನ್ನು ರೂಪಿಸುತ್ತಾ ಇರಬೇಕು ಎಂದು ವಿವರಿಸಿದರು. ಭಾಷೆಯು ಏಕಕಾಲಕ್ಕೆ ಶೇಕಡಾ ನೂರರಷ್ಟು ಯಾದೃಚ್ಛಿಕವಾಗಿದೆ ಮತ್ತು ಶೇಕಡಾ ನೂರರಷ್ಟು ನಿಯಮಬದ್ಧವಾಗಿದೆ.

ಅನಂತರದ ಅಧಿವೇಶನವು ಒಂದು ಸಿಲೆಬಲ್ (syllable–ಕಾಗುಣಿತ) ಹೇಗೆ ರಚನೆಯಾಗಿದೆ ಎಂಬ ಚರ್ಚೆಯೊಂದಿಗೆ ಪ್ರಾರಂಭಗೊಂಡಿತು. ಸಿಲೆಬಲ್ ಎಂಬುದು ಧ್ವನಿಗಳ ಕನಿಷ್ಠತಮ ಸಮುಚ್ಚಯ. ನಾವದನ್ನು ಒಂದು ಉಸಿರಿನಲ್ಲಿ ಹೇಳಬಹುದು. ಸಿಲೆಬಲ್‌ನ ಸ್ವರ ಧ್ವನಿಯು (vocalic sound) ಅದರ ಕೇಂದ್ರ (nucleus) ಮತ್ತು ಅದರ ಏರು ಅಥವಾ ಉಚ್ಚ ಧ್ವನಿಯೂ ಆಗಿರುತ್ತದೆ. ಶುದ್ಧ ಅಥವಾ ಕೇವಲ ವ್ಯಂಜನ ಧ್ವನಿಗಳು ಸಿಲೆಬಿಕ್ ಅಲ್ಲ. ಅಂದರೆ ಅವು ಒಂದು ಸ್ವರ ಧ್ವನಿಯ ಜೊತೆಗೂಡಿದಾಗ ಮಾತ್ರ ಸಿಲೆಬಿಕ್ ಆಗುತ್ತವೆ. /m/, /n/, /l/ ಧ್ವನಿಗಳು ವಿಶೇಷವಾದವು ಯಾಕೆಂದರೆ ಅವು + ಸಿಲೆಬಿಕ್ ಮತ್ತು – ಸಿಲೆಬಿಕ್) ಎರಡೂ ವರ್ಗಗಳಿಗೂ ಸೇರುತ್ತವೆ. ಅವು ಒಂದು ಪದದ ಕೊನೆಗೆ ಬಂದರೂ ಏರು

ಸಿಲೆಬಿಕ್ (syllabic peak) ಆಗಿಬಿಡಹುದು. ಉದಾಹರಣೆಗೆ, ಇಂಗ್ಲಿಷ್‌ನ 'little' or 'button'ನಂತಹ ಪದಗಳು. ಅಥವಾ ಅವು ಪದದ ಪ್ರಾರಂಭದಲ್ಲಿ ನಿಜವಾದ ವ್ಯಂಜನ ಮಾತ್ರವೇ ಆಗಿ ಇರಬಹುದು. /ತಿ/ ಮತ್ತು /ರಿ/ ಗಳು ಇನ್ನೊಂದೆಡೆ, ಬಹಳ ಟ್ರಿಕ್ಕಿ ಧ್ವನಿಗಳು. ಅವು ಶುದ್ಧ ವ್ಯಂಜನಗಳೂ ಅಲ್ಲ, ಅಥವಾ ಅವು ಸಿಲೆಬಿಕ್ ಏರು ಸ್ವರವನ್ನೂ ರೂಪಿಸಲಾರವು. ನಿಜವಾದ ಸ್ವರಗಳು ಮಾತ್ರ ಸಿಲೆಬಿಕ್ ಏರ (ಉಚ್ಚ)ನ್ನು ರೂಪಿಸಲ್ಲವು. ಅವು ಸಿಲೆಬಲ್‌ನ ಕೇಂದ್ರಗಳೂ ಹೌದು. ಈ ಚರ್ಚೆಯ ಮುಂದಿನ ಭಾಗವಾಗಿ, ಭಾಗಾರ್ಥಿಗಳು ಬಹುವಚನಗಳ ಮೇಲೆ ಕೆಲಸಮಾಡಿ ಪ್ರಸ್ತುತಿ ಮಾಡಿದರು.

ಇಂಗ್ಲಿಷ್‌ನ ಬಹುವಚನಗಳ ಮಾರ್ಫೀಮ್‌ಗಳ ಕುರಿತ ಒಂದು ಚರ್ಚೆ

ಪ್ರೊ. ಅಗ್ನಿಹೋತ್ರಿಯವರು ಇಂಗ್ಲಿಷಿನಲ್ಲಿ ನಾಮಪದದ ಬಹುವಚನ ರೂಪಗಳು (allomorphs) /s/, /z/ and /iz/ ಈ ಧ್ವನಿಗಳಿಂದ ರಚಿತವಾಗುತ್ತವೆ ಎಂದು ವಿವರಿಸಿದರು. ಆದರೆ ಅಪವಾದಗಳ ಹಾಗೆ 'child, ox, mouse, tooth, wife, and knife' ಇಂಥ ಪದಗಳೂ ಇವೆ ಎಂದು ಭಾಗಾರ್ಥಿಗಳ ಪಟ್ಟಿಯಿಂದ ತೆಗೆದು ತೋರಿಸಿದರು. ಇತರ ಎಲ್ಲ ಪದಗಳ ಬಹುವಚನ ರೂಪವು ಮೂರು ನಿಯಮಗಳಿಂದ ರೂಪಿತವಾಗಿವೆ ಎಂದೂ ವಿಸ್ತರಿಸಿ ತಿಳಿಸಿದರು. ದಿನದ ಕೊನೆಯ ಅಧಿವೇಶನವು ಹಿಂದಿನ ದಿನ ನೀಡಲಾದ ಓದುವ ಸಾಮಗ್ರಿಯನ್ನು ಆಧರಿಸಿ ಭಾಷೆಯ ಸ್ವರೂಪದ ಕಡೆಗೆ ಗಮನ ನೀಡುವಂತೆ ಇತ್ತು. ನಾಲ್ಕು ವರ್ಷದ ಒಂದು ಮಗುವಿನ ಭಾಷಿಕ ಸಾಮರ್ಥ್ಯದ ಮೇಲೆ ಬಹಳ ಆಳವಾದ ಚರ್ಚೆ ನಡೆಯಿತು.

ಭಾಷಾ ಗಳಿಕೆಯ ಮೇಲೆ ಇನ್ನಷ್ಟು ಹುಡುಕಾಟಗಳು

ಕಾರ್ಯಾಗಾರದ ಐದನೇ ದಿನ, ಪ್ರೊ. ಅಗ್ನಿಹೋತ್ರಿಯವರು ಭಾಗಾರ್ಥಿಗಳ ಮುಂದೆ ಬಹುವಚನ ಮಾರ್ಫೀಮ್‌ಗಳನ್ನು ಕುರಿತ ಒಂದು ಸಮಸ್ಯೆಯನ್ನು ಮುಂದಿಟ್ಟು ಪರಿಹರಿಸುವಂತೆ ಕೇಳಿದರು. ಭಾಗಾರ್ಥಿಗಳು ಪೂರ್ಣ ವಿಶ್ವಾಸದಿಂದ ಸಮಸ್ಯೆಯನ್ನು ಬಿಡಿಸಿದರು. ಪ್ರೊ. ಅಗ್ನಿಹೋತ್ರಿಯವರು, ಮೂರು ವರ್ಷದ ಒಂದು ಮಗುವಿಗೂ ಇದೇ ಮಟ್ಟದ ತಿಳಿವಳಿಕೆ ಇರುತ್ತದೆ ಎಂದು ವಿವರಿಸಿದರು. ಇದು, ಮೂರು ವರ್ಷದ ಒಂದು ಮಗುವೂ ಕೂಡ ಭಾಷೆಯ ಧ್ವನಿ ವ್ಯವಸ್ಥೆಗೆ ಸಂಬಂಧಿಸಿದ ಅಂತರ್ಗತ ನಿಯಮಗಳನ್ನು, ಪ್ರಜ್ಞಾಪೂರ್ವಕವಾದ ಒಂದು ಪ್ರಯತ್ನವಿಲ್ಲದೆ, ತನಗೆ ತಾನೆ ರೂಪಿಸಿಕೊಳ್ಳಬಲ್ಲುದು ಎಂಬುದನ್ನು ಸಾಬೀತು ಪಡಿಸುತ್ತದೆ. ಇದರ ಅನಂತರ ಹಿಂದಿ ಭಾಷೆಯಲ್ಲಿ ಬಹುವಚನ ರೂಪಗಳು ಹೇಗಿವೆ ಎಂಬ ಕುರಿತು ಚರ್ಚೆಯು ಮುಂದುವರಿಯಿತು. ಈ ಚರ್ಚೆಯಿಂದ

ನಾಮಪದಗಳ ವಿವಿಧ ಬಹುವಚನ ರೂಪಗಳು ಒಂದೇ ಬಗೆಯದಾಗಿ ಕಾಣಬಹುದು, ಆದರೆ ಅವು ವಿವಿಧ ಭಾಷಾ ಕಾರ್ಯಗಳನ್ನು ನೆರವೇರಿಸುತ್ತವೆ ಎಂಬ ವಿಷಯವು ಕಂಡುಬಂತು. ಇಂಗ್ಲಿಷ್ ಭಾಷೆಯು ಮನೆ ಮಾತಾಗಿರುವ ಮಕ್ಕಳು ಒಂದು ಪದದ ಬಹುವಚನ ರೂಪವನ್ನು ಲಿಂಗ ರೂಪಕ್ಕಿಂತ ಮೊದಲೇ ಗಳಿಸುತ್ತಾರೆ, ಅದೇ ಹಿಂದಿ ಮನೆ ಮಾತಾಗಿರುವ ಮಕ್ಕಳು ಒಂದು ಪದದ ಲಿಂಗ ರೂಪವನ್ನು ಬಹುವಚನಗಳಿಗಿಂತ ಮೊದಲೇ ಗಳಿಸುತ್ತಾರೆ.

ಭಾಷೆಯ ರಚನೆಯನ್ನು ತೆರೆದು ತೋರಿಸುವ ಪದದ ಬಲೆ: ಭಾಷೆಯ ಗಳಿಕೆಯನ್ನು ವಿಶದಪಡಿಸಿಕೊಳ್ಳುವುದು

ಮುಂದಿನ ಕೆಲಸವು ಪದಗಳ ಬಲೆಯ್ನು ರಚಿಸುವುದಿತ್ತು. ಹಿಂದಿ ಪದ 'ಚಲ್' ಅನ್ನು ಬೋರ್ಡ್ ಮೇಲೆ ಬರೆಯಲಾಯಿತು. ಗುಂಪಿನ ಸದಸ್ಯರು ಸುಮಾರು ಇಪ್ಪತ್ತರಷ್ಟು ರೂಪಗಳು ಹಿಂದಿ ಮತ್ತು ತಾವು ಮಾತಾಡುವ ಇತರ ಭಾಷೆಗಳಲ್ಲಿ ಇರುವುದನ್ನು ಪಟ್ಟಿಮಾಡಿದರು. ಈ ಪದದ ಅರ್ಥಕೊಡುವ ಆಂಗ್ಲ ಪದ 'walk'ಗೆ ಬಹಳ ಕಡಮೆ ರೂಪಗಳಿರುವುದನ್ನು ಗಮನಿಸಲಾಯಿತು. ಒಂದು ಮಗುವಿಗೆ ಐದರಿಂದ ಆರು ಪದಗಳ ಬಲೆ ಪರಿಚಿತವಾದರೆ ಮುಂದೆ ಅದು ಒಂದು ಭಾಷೆಯ ಪದಗಳ ವಿವಿಧ ರೂಪರಚನೆಗಳನ್ನು ಊಹಿಸಿಕೊಳ್ಳುತ್ತದೆ. ಅನಂತರ ಅವಳು/ನು ತಾನು ಈ ವರೆಗೆ ಕೇಳಿರದ ಪದಗಳ ವಿವಿಧ ರೂಪಗಳನ್ನು ಊಹಿಸಿ ರಚಿಸಿಕೊಳ್ಳುವುದಕ್ಕೆ ಸಮರ್ಥವಾಗುತ್ತದೆ ಎಂಬುದನ್ನು ತಿಳಿಸಲಾಯಿತು. ಈ ಕಾರಣಕ್ಕಾಗಿಯೇ ಮಕ್ಕಳು ಪದಗಳಲ್ಲಿ ತಾರ್ಕಿಕ ತಪ್ಪುಗಳನ್ನು ಅಥವಾ ನಿಯಮಕ್ಕೆ ಅಪವಾದವೆನ್ನುವ ಅಭ್ಯಾಸಗಳನ್ನು ಮಾಡುತ್ತಾರೆ. ಹೀಗೆಯೇ ಮಕ್ಕಳು ಸುಳ್ಳುಪದಗಳನ್ನೂ (pseudo words) ರಚಿಸಿಕೊಳ್ಳುವುದು.

ಇದರ ಅನಂತರದ ಅಧಿವೇಶನದಲ್ಲಿ, ವಾಕ್ಯದ ರಚನೆಯನ್ನು ವಿಶ್ಲೇಷಿಸಲಾಯಿತು. ಕರ್ತೃಪದ, ಕ್ರಿಯಾಪದ ಮತ್ತು ಕರ್ಮಪದಗಳ (SVO-Subject-verb-object) ವಿನ್ಯಾಸದ ಕುರಿತು ವಿವರವಾದ ಚರ್ಚೆ ನಡೆಯಿತು. ಒಂದು ನಮೂನೆ ಪಟ್ಟಿಯನ್ನು ಭಾಗಾರ್ಥಿಗಳಿಗೆ ಕೊಟ್ಟು ಅದರಲ್ಲಿ ಪುರುಷ–ವಚನ–ಲಿಂಗ (Person-Number-Gender-PNG)ಗಳನ್ನು ತುಂಬಿ ಅವರವರ ಗುಂಪಿನ ಭಾಷೆಗಳ ನಿಯಮಗಳನ್ನು ಗುರುತಿಸುವಂತೆ ತಿಳಿಸಲಾಯಿತು. ಇದರ ಅನಂತರ ಅಪರಾಹ್ನದಲ್ಲಿ ಭಾಷಾ ಕುಟುಂಬಗಳ ವಿಷಯವಾಗಿ ಚರ್ಚೆ ನಡೆಯಿತು.

ಕೊನೆಯ ದಿನವು ಶ್ರೀ ಖಜಾನ್ ಸಿಂಗ್‌ಜೀಯವರ ಸುಂದರವಾದೊಂದು ಬಾಲಗೀತೆಯ ಗಾಯನದೊಂದಿಗೆ ಪ್ರಾರಂಭವಾಯಿತು. ಅದನ್ನು ಅನುಸರಿಸಿ

ಭಾಷೆ ಮತ್ತು ಸೌಂದರ್ಯಾನುಭೂತಿ ಕುರಿತು ಗುಂಪು ಚರ್ಚೆ ನಡೆಯಿತು. ಇದರ ಅನಂತರ ಬೇರೊಂದು ಗುಂಪು ಚಟುವಟಿಕೆಯನ್ನು ಯೋಜಿಸಿದರು. ಭಾಗಾರ್ಥಿಗಳನ್ನು ಆರು ತಂಡಗಳಾಗಿ ವಿಂಗಡಿಸಲಾಯಿತು. ಈ ತಂಡಗಳ ಕೆಲಸ i) ನಿಷೇಧಾತ್ಮಕ ವಾಕ್ಯಗಳನ್ನು (negative sentences), ii) ಹೌದು ಅಲ್ಲ ಪ್ರಶ್ನೆಗಳನ್ನು (yes-no questions), ಮತ್ತು iii) ಏನು ಮತ್ತು ಹೇಗೆ ಪ್ರಶ್ನೆಗಳನ್ನು ('Wh' questions) ಮಾಡುವುದು ಮತ್ತು ಆ ಸಂರಚನೆಗಳ ನಿಯಮಗಳನ್ನು ಗುರುತಿಸುವುದು ಇತ್ತು.

ಎರಡನೇ ಅಧಿವೇಶನವು ನಕಾರಾತ್ಮಕ ವಾಕ್ಯಗಳು, ಹೌದು ಅಲ್ಲ ಪ್ರಶ್ನೆಗಳು, ಮತ್ತು ಏನು ಮತ್ತು ಹೇಗೆ ಪ್ರಶ್ನೆಗಳನ್ನು ಇಂಗ್ಲಿಷ್ ಮತ್ತು ಹಿಂದಿ ಎರಡೂ ಭಾಷೆಗಳಲ್ಲಿ ಪ್ರಸ್ತುತಿ ಮಾಡುವುದರೊಂದಿಗೆ ಪ್ರಾರಂಭವಾಯಿತು. ಭಾಗಾರ್ಥಿಗಳು ನಿಷೇಧಾತ್ಮಕ ವಾಕ್ಯಗಳ ಸಾಮಾನ್ಯ ನಿಯಮಗಳನ್ನು ಹಿಂದಿ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ವಿಶ್ಲೇಷಿಸಿದರು. ಬಹಳ ಭಾಷೆಗಳಲ್ಲಿ ನಿಷೇಧಾತ್ಮಕವನ್ನು ಹೇಳುವ ಪದವು ಕ್ರಿಯಾಪದದ ಜೊತೆಗೇ ಬರುತ್ತದೆ ಎಂಬ ತೀರ್ಮಾನಕ್ಕೆ ಬಂದರು. ಭಾಗಾರ್ಥಿಗಳು ನಾಲ್ಕು ವರ್ಷದ ಒಂದು ಮಗುವಿಗೆ ಈ ಜ್ಞಾನ ಇರುತ್ತದೆ ಎನ್ನುವುದನ್ನು ಕುರಿತು ಚಕಿತಗೊಂಡರು.

'ಹೌದು ಮತ್ತು ಅಲ್ಲ' ಪ್ರಶ್ನೆಗಳನ್ನೂ ಹಿಂದಿ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ವಿವರವಾಗಿ ಪರೀಕ್ಷಿಸಲಾಯಿತು. 'ಯಾಕೆ ಮತ್ತು ಹೇಗೆ' ಪ್ರಶ್ನೆಗಳ ಸ್ವರೂಪವು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸ್ವಲ್ಪ ಭಿನ್ನವಾಗಿದೆ. ಆ ಎಲ್ಲ ವಿಧದ ಪ್ರಶ್ನೆಗಳನ್ನು ರೂಪಿಸುವ ನಿಯಮಗಳ ಮಧ್ಯದ ವ್ಯತ್ಯಾಸಗಳೂ ಮತ್ತು ಅವನ್ನು ಉತ್ತರಿಸುವ ಬಗೆಗಳೂ ಮಕ್ಕಳಿಗೆ ತಿಳಿದಿರುತ್ತವೆ ಎಂಬುದನ್ನು ಒತ್ತುಕೊಟ್ಟು ಹೇಳಿದರು. ಮಕ್ಕಳು ಒಳಸುರಿಯಾಗಿ ಪಡೆಯುವ ಭಾಷೆಯು ಅವರು ಮಾತಾಡುವ ಭಾಷೆಯ ಪ್ರಮಾಣಕ್ಕಿಂತಲೂ ಬಹಳ ಕಡಮೆ ಎಂಬುದು ನಿಜಕ್ಕೂ ಆಶ್ಚರ್ಯಪಡಿಸುವ ಅಂಶವೇ ಆಗಿದೆ. ಇದನ್ನು 'ಪ್ಲೇಟೋವಿನ ಸಮಸ್ಯೆ' ('Plato's Problem') ಎಂದು ಕರೆಯಲಾಗುತ್ತದೆ. ಮಕ್ಕಳು ಭಾಷೆಯ ಎಲ್ಲ ನಿಯಮಗಳನ್ನೂ ಅನುಸರಿಸುತ್ತಾರೆ. ಅದು ಮೇಲೆ ಹೇಳಿದ ಎಲ್ಲ ನಿಯಮಗಳೂ ಅಲ್ಲದೆ ಔಪಚಾರಿಕವಾಗಿ ಹೇಳಿಕೊಡದ ಇನ್ನೂ ಬಹಳಷ್ಟನ್ನು ಒಳಗೊಂಡಿದೆ. ಈ ಎಲ್ಲ ಅವಲೋಕನಗಳೂ 'ಭಾಷಾ ಗಳಿಕೆಯ ವ್ಯವಸ್ಥೆ', ಅಂದರೆ ಸಾರ್ವತ್ರಿಕ ವ್ಯಾಕರಣ ಮತ್ತು ಭಾಷೆಯ ಸಾರ್ವತ್ರಿಕ ಮಾನದಂಡವನ್ನು ನಿಗದಿಪಡಿಸುವ ಪ್ರತಿಪಾದನೆಗೆ ಕಾರಣವಾಗಿದೆ. ಮಕ್ಕಳು ಅನುಕರಣೆ ಮಾತ್ರದಿಂದ ಭಾಷೆ ಕಲಿಯುವುದು ಸಾಧ್ಯವಿಲ್ಲ. ಯಾಕೆಂದರೆ

ಅವರು ಹಿಂದೆ ಎಂದೂ ಕೇಳಿರದ ವಾಕ್ಯಗಳನ್ನೂ ಆಡುತ್ತಾರೆ. ಒಂದು ಮಗು, ಅದಕ್ಕೆ ಅರ್ಥಮಾಡಿಕೊಳ್ಳುವ ಸಾಂದರ್ಭಿಕತೆ ಸಿಕ್ಕಿದರೆ ಅದು ಕೇಳಿಸಿಕೊಳ್ಳುವ ಯಾವುದೇ ಭಾಷೆಯನ್ನೂ ಕಲಿಯಬಲ್ಲದು. ಭಾಷಾ ಕಲಿಕೆಯು ಸಾಧ್ಯ ಇರುವಷ್ಟರ ಮಟ್ಟಿಗೆ ಭಾಷಾ ಗಳಿಕೆಯ ಪ್ರತಿರೂಪವಾಗಬೇಕು.

* * *

ಚಿಂತನಾತ್ಮಕ ಪ್ರಶ್ನೆಗಳು:

೧. ಭಾಷೆಯ ಸ್ವರೂಪ ಮತ್ತು ಸಾರ್ವತ್ರಿಕ ವ್ಯಾಕರಣ ತತ್ತ್ವವನ್ನು ಅದರ ಧ್ವನಿರಚನೆ, ಪದರಚನೆ ಮತ್ತು ವಾಕ್ಯರಚನೆಯ ಅಂಶಗಳ ಮೇಲಿಂದ ಚರ್ಚಿಸಿ.

೨. ನಾಮ್ ಚೋಮ್ಸ್ಕಿಯ ಪ್ಲೇಟೋವಿನ ಸಮಸ್ಯೆ ಎಂಬ ಪರಿಕಲ್ಪನೆಯನ್ನು ವಿವರಿಸಿ. ಆ ಪರಿಕಲ್ಪನೆಯ ಬಳಕೆಯ ಹಿನ್ನೆಲೆಯೇನು?

೩. ಭಾಷೆಯ ಸಂದರ್ಭದಲ್ಲಿ ಲೇಖಕನ ಆಶಯ ಮತ್ತು ಓದುಗರ ಅರ್ಥೈಸುವಿಕೆ ಭಿನ್ನವಾಗುವುದು ಹೇಗೆ?

ನಿವೇದಿತಾ ವಿಜಯ್ ಬೆಡದೂರ್: ಅವರು ಇಂಗ್ಲಿಷ್ ಅಧ್ಯಾಪಕಿಯಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ಕೇಂದ್ರೀಯ ವಿದ್ಯಾಲಯದ ಪ್ರಿನ್ಸಿಪಾಲರಾಗಿ ದೇಶದೊಳಗೆ ಮತ್ತು ವಿದೇಶದಲ್ಲಿ ಇದ್ದವರು. ಈಗ ಅವರು ಅಜೀಮ್ ಪ್ರೇಮ್‌ಜೀ ವಿಶ್ವವಿದ್ಯಾಲಯದ ಸಂಪನ್ಮೂಲ ಕೇಂದ್ರದಲ್ಲಿ ಕೆಲಸಮಾಡುತ್ತಿದ್ದಾರೆ. nivedita@azimpremjifoundation.org

ಅನುವಾದ: ರಾಮಕೃಷ್ಣ /**ಪರಿಶೀಲನೆ:** ದೇವಕಿ ಲಕ್ಷ್ಮೀನಾರಾಯಣ

ಮೂಲ: *Language and Language Teaching*, Volume 1 Number 2 Issue 4, July 2013.

❑